ಪರಿಹಾರವನ್ನು ಕಂಡುಹಿಡಿಯಬೇಕು.

ಆರ್ಥಿಕ ಒತ್ತಡಗಳ ದೆಸೆಯಿಂದ ಸ್ತ್ರೀಯರೂ ಧನಸಂಪಾದನೆಯ ಮಾರ್ಗವನ್ನು ಹಿಡಿಯುತ್ತಿರುವುದರಿಂದ ಸಂಸಾರದ ಅಡಿಪಾಯ ಅಲ್ಲಾಡುತ್ತಿದೆ, ಸಂಸಾರ ಸಂಬಂಧಗಳು ಕೇವಲ ಔಪಚಾರಿಕವಾಗುತ್ತಿವೆ ಎಂಬುದರಲ್ಲಿ ಯಾವ ಸಂದೇಹವೂ ಉಳಿಯಬೇಕಾಗಿಲ್ಲ. ಇದರ ಪರಿಣಾಮವಾಗಿ ಸಂಸಾರಗಳಲ್ಲಿ ವ್ಯವಸ್ಥೆ ಕೆಡುತ್ತಿದೆ. ಇದನ್ನು ಹೇಗೆ ಸರಿಪಡಿಸುವುದು ಎಂಬುದೇ ಒಂದು ತೀವ್ರ ಸಮಸ್ಯೆಯಾಗಿದೆ! ನಾವೆಲ್ಲರೂ ಸದಾ ದೂರುತ್ತಿರುವ ವಿದ್ಯಾರ್ಥಿಗಳ ಸಮಸ್ಯೆಯ ಮೂಲವೂ ಇಲ್ಲಿಯೇ ಇದೆ! ಬೆಳೆಯುವ ಮಕ್ಕಳನ್ನು ಮನೆಯಲ್ಲಿ ಸರಿಯಾಗಿ ಬೆಳೆಸದ ಫಲವೇ ಇದು!

ಆದುದರಿಂದ ಮಹಿಳೆಯರು ತಮ್ಮ ಗುರಿಯ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನಿಟ್ಟುಕೊಂಡು ಅದಕ್ಕೆ ತಕ್ಕಂತೆ ತಮ್ಮ ಕಾರ್ಯ ಕರ್ತವ್ಯಗಳನ್ನು ಅಳವಡಿಸಿಕೊಂಡರೆ ಎಲ್ಲವೂ ಸರಿ ಹೋಗುತ್ತದೆ. ಇದನ್ನು ಮಾಡುವಾಗ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಮಾಡಬೇಕೇ ಹೊರತು ಪಾಶ್ಚಾತ್ಯ ಸಂಸ್ಕೃತಿಗೆ ಅನುಗುಣವಾಗಿ ಅಲ್ಲ ಎಂಬುದು ನೆನಪಿನಲ್ಲಿರಬೇಕು.

**ತಾ**ಯ್ತನದ ಅರಿವುಳ್ಳ ತಾಯಂದಿರಿಗೆ ಪ್ರಪಂಚವನ್ನು ಸುವ್ಯವಸ್ಥೆಗೆ ತರುವ ಸಾಮರ್ಥ್ಯವಿದೆ. ಉತ್ತಮ ತಾಯಿಯ ಆರೈಕೆ ಸ್ಥಿರವೂ ಶಾಂತಿಯುತವೂ ಆದ ಒಂದು ನಾಗರಿಕತೆಯನ್ನು ಕಟ್ಟುವಲ್ಲಿ ನಂಬಲಸಾಧ್ಯವಾಗುವಷ್ಟು ಕೊಡುಗೆಯನ್ನು ನೀಡುತ್ತದೆ

ಸಿ.ಇ.ಬಾರ್ಕರ್
(ಪ್ರಸಿದ್ಧ ಮನೋವೈದ್ಯ)

## ಪ್ರಹಸನ ಪ್ರಸಂಗ

❋ **ವ್ಯಕ್ತಿ**ಯೊಬ್ಬನು ವೈದ್ಯನ ಹತ್ತಿರ ಬಂದು, 'ನನ್ನ ದೇಹದ ಎಲ್ಲ ಭಾಗದಲ್ಲಿಯೂ ನೋವಾಗುತ್ತಿದೆ' ಎಂದನು. ಇದನ್ನು ಕೇಳಿ ವೈದ್ಯನಿಗೆ ಆಶ್ಚರ್ಯವಾಯಿತು. 'ನಿನ್ನ ಬೆರಳಿನಿಂದ ದೇಹದ ಬೇರೆ ಬೇರೆ ಬಾಗಗಳನ್ನು ಮುಟ್ಟು' ಎಂದು ಆ ವ್ಯಕ್ತಿಗೆ ಹೇಳಿದನು. ಅವನು ತನ್ನ ತೋರ್ಬೆರಳಿನಿಂದ ಹಣೆ, ಕಿವಿ, ಕೆನ್ನೆ, ಕುತ್ತಿಗೆ, ಹೊಟ್ಟೆ—ಹೀಗೆ ಬೇರೆ ಬೇರೆ ಭಾಗಗಳನ್ನು ಸ್ಪರ್ಶಿಸುತ್ತ ಹೋದನು. ಒಮ್ಮೊಮ್ಮೆ ಹಾಗೆ ಸ್ಪರ್ಶಿಸಿದಾಗಲೂ ತೀವ್ರ ವೇದನೆಯನ್ನು ವ್ಯಕ್ತಪಡಿಸುತ್ತಿದ್ದನು. ಅವನ ಮುಖವನ್ನು ನೋಡಿದಾಗ ಅವನು ನಟಿಸುತ್ತಿರುವನು ಎಂದು ವೈದ್ಯನಿಗೆ ಅನಿಸಲಿಲ್ಲ.

ಇದೆಂತಹ ವಿಚಿತ್ರ ಕಾಯಿಲೆ, ಒಮ್ಮೆಯೇ ದೇಹದ ಎಲ್ಲ ಭಾಗಗಳಲ್ಲಿಯೂ ನೋವಾಗುವುದು ಹೇಗೆ ಸಾಧ್ಯ—ಎಂದು ವೈದ್ಯನು ಚಿಂತಿಸತೊಡಗಿದನು. ರೋಗಿಯನ್ನು ಅನೇಕ ಪರೀಕ್ಷೆಗಳಿಗೆ ಒಳಪಡಿಸಿ ಎಕ್ಸ್-ರೇ, ಸ್ಕ್ಯಾನಿಂಗ್ ಮುಂತಾದ ಉಪಚಾರಗಳನ್ನು ಮಾಡಿ ಕೊನೆಗೆ ವೈದ್ಯನು ರೋಗಿಯ ನಿಜವಾದ ಸಮಸ್ಯೆ ಏನು ಎಂಬುದನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದನು. ರೋಗಿಗೆ ಹೇಳಿದನು: 'ನೋವಿರುವುದು ನಿನ್ನ ತೋರ್ಬೆರಳಿನಲ್ಲಿ—ಅಲ್ಲಿ ಫ್ರಾಕ್ಚರ್ ಆಗಿದೆ.'

ಹೀಗೆಯೇ ನಾವು ನಮ್ಮ ದುಃಖದ ಮೂಲವನ್ನು ಅರಿಯದೆ ಹೊರಗಿನ ಸನ್ನಿವೇಶಗಳನ್ನೂ ವ್ಯಕ್ತಿಗಳನ್ನೂ ವಸ್ತುಗಳನ್ನೂ ನಮ್ಮ ದುಃಖಕ್ಕಾಗಿ ದೂರುತ್ತೇವೆ. ಆದರೆ ನಮ್ಮ ದುಃಖದ ಮೂಲ ನಮ್ಮ ಮನಸ್ಸೇ.

❋ **ಒಂದು** ಮೂರ್ತಿಯನ್ನು ಪ್ರತಿಷ್ಠಾಪಿಸಿದ ಮಾತ್ರಕ್ಕೆ ಭಗವಂತನು ದೇವಾಲಯದಲ್ಲಿ ಬಂದು ನೆಲಸುವುದಿಲ್ಲ. ಅಲ್ಲಿ ಅವನ ಸಾನ್ನಿಧ್ಯ ಭಕ್ತರ ಭಕ್ತಿ ಭಾವವನ್ನು ಅವಲಂಬಿಸುತ್ತದೆ.

ಅಮೆರಿಕದಲ್ಲಿ ಬಿಳಿಯರಿಗೆ ಮತ್ತು ಕರಿಯರಿಗೆ ಪ್ರತ್ಯೇಕ ಚರ್ಚುಗಳಿರುತ್ತಿದ್ದುವಂತೆ. ಬಿಳಿಯರ ಚರ್ಚಿಗೆ ಕರಿಯರು ಹೋಗುವಂತಿಲ್ಲ; ಕರಿಯರ ಚರ್ಚಿಗೆ ಬಿಳಿಯರು ಹೋಗುತ್ತಿರಲಿಲ್ಲ.

ಒಮ್ಮೆ ಕರಿಯನೊಬ್ಬನು ಒಂದು ಊರಿಗೆ ಯಾವುದೊ ಕಾರ್ಯಾರ್ಥವಾಗಿ ಹೋಗಿದ್ದ. ಅವನು ನಿಷ್ಠಾವಂತ ಕ್ರೈಸ್ತ. ಪ್ರಾರ್ಥನೆಯ ಸಮಯ ಬಂದಕೂಡಲೆ ಹತ್ತಿರದಲ್ಲಿಯೇ ಇದ್ದ ಒಂದು ಚರ್ಚಿಗೆ ಪ್ರಾರ್ಥನೆಗಾಗಿ ಹೋದನು. ಆತ ಒಳಗೆ ಪ್ರವೇಶಿಸುವುದಕ್ಕೆ ಮುಂಚೆಯೆ ಪಾದ್ರಿಯೊಬ್ಬನು ಅವನನ್ನು ಕರೆದು, 'ಇದು ಬಿಳಿಯರಿಗಾಗಿ ಮೀಸಲಿರುವ ಚರ್ಚು. ನಿನಗೆ ಪ್ರವೇಶವಿಲ್ಲ', ಎಂದನು. ಕರಿಯನು, 'ನಾನು ಈಗ ಪ್ರಾರ್ಥನೆ ಮಾಡಲೇಬೇಕು. ಅದಿಲ್ಲದೆ ಇರಲಾರೆ. ದಯವಿಟ್ಟು ಅವಕಾಶ ಕೊಡಿ' ಎಂದು ಕಳಕಳಿಯಿಂದ ಕೇಳಿಕೊಂಡನು.

ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪಾದ್ರಿ ಹೇಳಿದ : 'ನೋಡು, ನೀನು ಆ ಚರ್ಚಿನ ಮುಂದೆ ನಿಂತು, "ನಾನು ಒಳಗೆ ಪ್ರವೇಶಿಸಬಹುದೆ?" ಎಂದು ಕ್ರಿಸ್ತನನ್ನೇ ಕೇಳು. ಅವನು "ಹ್ಞು" ಎಂದರೆ ನೀನು ಹೋಗಬಹುದು. ನನ್ನ ಅಭ್ಯಂತರವಿಲ್ಲ.'

ಕರಿಯ ಚರ್ಚಿನ ಮುಂದೆ ಕೈಮುಗಿದು ಸ್ವಲ್ಪಹೊತ್ತು ನಿಂತು, ಅನಂತರ ತನ್ನ ದಾರಿಯನ್ನು ಹಿಡಿದನು. ಪಾದ್ರಿ ಅವನನ್ನು ಕರೆದು ವಿಚಾರಿಸಿದನು:

'ಕ್ರಿಸ್ತನನ್ನು ಕೇಳಿದೆಯ?'

'ಹೌದು.'

'ಅವನು ಏನೆಂದ?'

'ಅವನು ಹೇಳಿದ, "ನಾನೇ ಇದುವರೆಗೂ ಈ ಚರ್ಚನ್ನು ಪ್ರವೇಶಿಸಿಲ್ಲ. ಆದ್ದರಿಂದ ನಿನಗೆ ಪ್ರವೇಶವಿಲ್ಲವೆಂದು ಚಿಂತಿಸಬೇಕಾಗಿಲ್ಲ. ಹೊರಟುಹೋಗು" ಎಂದು.'